<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.22/2018

ಚಾಸಾ-4 ಪ್ರಾಸಾ-1

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕ: 20.08.2019

| | | |
|---|---|---|
| ಹೆಸರು | : | ಶಶಿಕಲಾ ಪಾದಗಟ್ಟಿ |
| ಗಂಡನ ಹೆಸರು | : | ಸುರೇಶ |
| ವಯಸ್ಸು | : | 52-ವರ್ಷ |
| ಉದ್ಯೋಗ | : | ತಹಶೀಲ್ದಾರ |
| ವಾಸಸ್ಥಳ | : | ಧಾರವಾಡ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ದಿನಾಂಕ 19.08.2016 ರಿಂದ 31.08.2017 ರವರೆಗೆ ಅಫಜಲಪೂರದಲ್ಲಿ ತಹಶೀಲ್ದಾರ ಎಂದು ಸೇವೆ ಸಲ್ಲಿಸಿದ್ದೇನೆ. ದಿನಾಂಕ 02.12.2016 ರಂದು ಜಿಲ್ಲಾಧಿಕಾರಿಯವರ ನಿರ್ದೇಶನದಂತೆ ನಾನು, ಇತರ ಇಲಾಖೆಯ ಸಿಬ್ಬಂದಿಗಳ ಒಂದು ಗುಂಪನ್ನು ಮಾಡಿಕೊಂಡು ಬನ್ನೆಟ್ಟಿ ಗ್ರಾಮದ 11 ಜಮೀನುಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿ ಸದರಿ ಜಮೀನುಗಳಲ್ಲಿ 6678 ಘ.ಮೀ. ಮರಳನ್ನು ಅಕ್ರಮವಾಗಿ ಸಂಗ್ರಹಿಸಲಾಗಿತ್ತು. ಸದರಿ ಜಮೀನುಗಳ ಮಾಲಿಕ ಹೆಸರು ಹಾಗೂ ಸರ್ವೆ ನಂಬರ ಈಗ ನೆನಪಿಲ್ಲ. ಆ ಕುರಿತು ಸರಕಾರಿ ಪರವಾಗಿ ಪಿಡಬ್ಲುಡಿ ಇಲಾಖೆಯವರು ಪಿರ್ಯಾದಿ ನೀಡಿರುತ್ತಾರೆ. ಘಟನೆ ಕುರಿತು ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ದಿನಾಂಕ 02.12.2016 ರಂದು ಡಿಸಿ ರವರು ಅಫಜಲಪೂರ ತಾಲೂಕಿನ ಬನ್ನೆಟ್ಟಿಗೆ ಭೇಟಿ ನೀಡಿದ್ದರು. 11 ಜನರ ಜಮೀನುಗಳಿಗೆ ಆ ದಿನ ಮದ್ಯಾಹ್ನ 12.30 ರಿಂದ 3.30 ಗಂಟೆವರೆಗೆ ಭೇಟಿ ನೀಡಿರುತ್ತೇವೆ. ಸದರಿ 11 ಜಮೀನುಗಳು ಕೆಲವು

ಅಕ್ಕಪಕ್ಕದಲ್ಲಿದ್ದು ಮತ್ತು ಕೆಲವು ಅರ್ಧ ಕಿಮೀ ಅಂತರದಲ್ಲಿದ್ದವು. ಸದರಿ ಜಮೀನುಗಳಲ್ಲಿ ಯಾವ ಬೆಳೆಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳಲ್ಲಿ ಮರಳು ಇತ್ತು.

ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ 10-12 ಜನ ಗುಂಪು ರಚಿಸಿ ಬನ್ನೆಟ್ಟಿ ಗ್ರಾಮದ ಜಮೀನುಗಳಿಗೆ ಭೇಟಿ ನೀಡಿದಾಗ ಆರೋಪಿತರು ತಮ್ಮ ಜಮೀನುಗಳಲ್ಲಿ ಅಕ್ರಮವಾಗಿ ಮರಳು ಸಂಗ್ರಹಣೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ಗೊತ್ತಿಲ್ಲದಿದ್ದರೂ ಸಹ ಮೇಲಾಧಿಕಾರಿ ಮಾತು ಕೇಳಿಕೊಂಡು ಮತ್ತು ಆರೋಪಿತರಿಗೆ ಆಗಿಬರದ ರಾಜಕೀಯ ವ್ಯಕ್ತಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 2 ಮತ್ತು 3ನೇ ಆರೋಪಿತರ ಪರ ಶ್ರೀ ಎಂಎಸ್‌ಪಿ ವಕೀಲರಿಂದ

ಶ್ರೀ ಎಸ್ ಎಸ್ ಪಿ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
<u>ಅಫಜಲಪೂರ</u>

ಸಿಸಿ ನಂ.22/2018

ಚಾಸಾ-2 ಪ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ
ಹೇಳಿಕೆ ಪಡೆದುಕೊಳ್ಳಲಾಯಿತು
ದಿನಾಂಕಃ 20.08.2019

| | | |
|---|---|---|
| ಹೆಸರು | ಃ | ಶಿವಪ್ಪ ಕಡ್ಲೇವಾಡ |
| ತಂದೆ ಹೆಸರು | ಃ | ಗಿರಿಮಲ್ಲಪ್ಪ |
| ವಯಸ್ಸು | ಃ | 29-ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಅಫಜಲಪೂರ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

ಆರೋಪಿತರ ಪರಿಚಯವಿಲ್ಲ. ಈಗ ನಾನು ನೋಡುತ್ತಿರುವ ದಾಖಲೆ ಮೇಲಿನ ಸಹಿ ನನ್ನದೇ ಇರುತ್ತದೆ. ಸಾಕ್ಷಿ 11 ಘಟನಾ ಸ್ಥಳದ ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಳನ್ನು ನಿಪಿ-1 ರಿಂದ 11, ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1 ಎ ರಿಂದ 11 ಎ ಎಂದು ಗುರುತಿಸಲಾಯಿತು.

ನನ್ನ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ.

(ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ವಿನಂತಿಸಿದ್ದು, ಪ್ರಕರಣದಲ್ಲಿಯ ದಾಖಲೆಗಳನ್ನು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿಸಲಾಯಿತು)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 05.12.2016 ರಂದು ಮುಂಜಾನೆ 11 ರಿಂದ 12 ಗಂಟೆ ಸಮಯದಲ್ಲಿ ಅಕ್ರಮ ಮರಳು ಸಂಗ್ರಹಣೆ ಮಾಡಿದ ಜಮೀನುಗಳ ಸರ್ವೆ ನಂ.1/2, 1/3, 4/1/1, 4/1/7, 4/2/2, 5/4, 27/2, 31/6, 32/1, 34/1/3, 30/1 ಗಳಲ್ಲಿ ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನಮ್ಮ ಸಮಕ್ಷಮ ಮಾಡಿದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ